ಡಿಡಬ್ಲ್ಯೂ-2

ಹೆಸರುಃ ಹುಲಗಪ್ಪ ಪಿ ಬಿನ್ ಸಣ್ಣಹನುಮಂತಪ್ಪ

ದಿಃ **10-06-2025** ರಂದು **ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

ಪಾಟೀಸವಾಲು ಃ ವಾದಿ ಪರ ಶ್ರೀ ಸಿವಿಎನಜಿ ವಕೀಲರಿಂದ

ನಾನು 9 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಮಾತ್ರ ಓದಲು ಮತ್ತು ಬರೆಯಲು ಬರುತ್ತದೆ. ನನ್ನ ಸಾಕ್ಷ ಪ್ರಮಾಣಪತ್ರದಲ್ಲಿ ಬರೆದಿರುವಂತಹ ಸಂಗತಿಯನ್ನು ನಾನು ಓದಿ ಸಹಿ ಮಾಡಿರುತ್ತೇನೆ. ಸಾಕ್ಷಿಗೆ ಅವರ ಸಾಕ್ಷ್ಯ ಪ್ರಮಾಣ ಪತ್ರವನ್ನು ತೋರಿಸಿದ್ದು ಅವರು ಅದನ್ನು ಇಂಗ್ಲೀಷನಲ್ಲಿ ಬರೆದಿರುವದಾಗಿ ಹೇಳಿರುತ್ತಾರೆ. ನನಗೆ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುವಂತೆ ಮಂಗಳಪ್ಪ ಮತ್ತು ಅವರ ತಂಗಿ ಗಂಗಮ್ಮ ತಂದೆ ಗಂಗಪ್ಪ ಹೇಳಿದ ಮೇರೆಗೆ ಬಂದಿರುತ್ತೇನೆ.

2. ಬಸಣಗೌಡ ಪಾಟೀಲ ಎನ್ನುವವರು ಮಂಗಳಪ್ಪರವರ ವಿರುದ್ದ ಮನೆಯ ಸಲುವಾಗಿ ಜಾಗವಿದೆ ಎಂದು ಈ ದಾವೆ ದಾಖಲುಪಡಿಸಿರುತ್ತಾರೆ. ದಾವಾದ ಆಸ್ತಿ ಸಂಖ್ಯೆ 553 ಆಗಿರುತ್ತದೆ. ಈ ಆಸ್ತಿಯು ಬಸಣಗೌಡರವರ ಹೆಸರಿನಲ್ಲಿ ಇರುತ್ತದೆ. ಇವರಿಗೆ ಈ ಆಸ್ತಿ ಹೇಗೆ ಬಂದಿರುತ್ತದೆ ನನಗೆ ಗೊತ್ತಿರುವುದಿಲ್ಲ. ಮಂಗಳಪ್ಪನವರ ಆಸ್ತಿ ಸಂಖ್ಯೆ 554 ಆಗಿರುತ್ತದೇ. ನಾನು 554 ರ ಆಸ್ತಿಯನ್ನು ನೋಡಿರುತ್ತೇನೆ. ದಾವ ಆಸ್ತಿ ಸಂಖ್ಯೆ 553, 554

ರ ಆಸ್ತಿಯ ಪಕ್ಕದಲ್ಲಿ ಬರುತ್ತದೆ ಎಂದರೆ ಸರಿ. ದಾವಾ ಆಸ್ತಿಯು ಆಸ್ತಿ ಸಂಖ್ಯೆ 554 ರ ದಕ್ಷಿಣ ದಿಕ್ಕಿಗೆ ಬರುತ್ತದೆ ಎಂದರೆ ಸರಿಯಲ್ಲ.

3. ನಾನು 2010 ರಿಂದ ಮಹಾತ್ಮಗಾಂದಿ ನ್ಯಾಷನಲ್ ಎಂಪ್ಲಾಮೆಂಟ ಸ್ಕಿಮನಲ್ಲಿ ಕೆಲಸ ಮಾಡುತ್ತಿದ್ದು ದಿನಾಂಕವನ್ನು ಹೇಳಲು ನನಗೆ ನೆನಪಿರುವದಿಲ್ಲ. ನಾನು ಅಲ್ಲಿ ಕೆಲಸ ಮಾಡುತ್ತಿರುವ ಕುರಿತು ಯಾವುದೆ ದಾಖಲೆಗಳನ್ನು ನ್ಯಾಯಲಯಕ್ಕೆ ಹಾಜರುಪಡಿಸಿರುವುದಿಲ್ಲ.

- 5 -

ಆ ಸ್ಕೀಮನಲ್ಲಿ ಒಟ್ಟು 250 ಜನ ಕೆಲಸ ಮಾಡುತ್ತೇವೆ. ದಾವಾ ಆಸ್ತಿಯು ಪೂರ್ವ-ಪಶ್ಚಿಮ-20 ಪುಟ್, ಉತ್ತರ ದಕ್ಷಿಣ 25 ಪೂಟ ಇರುತ್ತದೆ ಎಂದರೆ ಸರಿಯಲ್ಲ, ಸರ್ಕಾರವು ಆಶ್ರಯ ಯೋಜನೆ ಅಡಿ ವಾದಿಗೆ 553 ರ ಸ್ವತ್ತನ್ನು ಹಾಗೂ ಪ್ರತಿವಾದಿ ಅಜ್ಜನಿಗೆ 554 ರ ಸ್ವತ್ತನ್ನು ಮಂಜೂರಾತಿ ಮಾಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವ ಸ್ವತ್ತಿನ ಅಕ್ಕಪಕ್ಕದಲ್ಲಿರುವ ಎಲ್ಲಾ ಮನೆಗಳು ಆಶ್ರಯ ಯೋಜನೆಅಡಿ ಮಂಜೂರಾದ ಮನೆಗಳಾಗಿರುತ್ತವೆ ಎಂದರೆ ಗೊತ್ತಿಲ್ಲ. ವಾದಿಯು ದಾವಾ ಆಸ್ತಿಯಲ್ಲಿ ಮಂಜೂರಾದ ದಿನಾಂಕದಿಂದ ಸ್ವಾದೀನದಲ್ಲಿರುತ್ತಾರೆ ಎಂದರೆ ಗೊತ್ತಿಲ್ಲ. ವಾದಿಯ ಮನೆ ಒಳಗೆ ಶೌಚಾಲಯ ಇರುವದಿಲ್ಲ ಎಂದರೆ ಗೊತ್ತಿರುವದಿಲ್ಲ. ಪ್ರತಿವಾದಿಯು ವಾದಿಯ ದಾವಾ ಆಸ್ತಿಯಲ್ಲಿ ಶೌಚಾಲಯವನ್ನು ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯು ವಾದಿಯ

ದಾವಾ ಆಸ್ತಿಯಲ್ಲಿ ಶೌಚಾಲಯ ಕಟ್ಟಿರುವ ಬಗ್ಗೆ ಪ್ರತಿವಾದಿಗೆ ವಾದಿ ನೋಟಿಸನ್ನು ಕೊಟ್ಟಿರುವ ಸಂಗತಿ ನನಗೆ ಗೊತ್ತಿರುತ್ತದೆ.

(ವಾದಿಪರ ವಕೀಲರ ಕೋರಿಕೆಯ ಮೇರೆಗೆ ಪಾಟೀಸವಾಲು ಮುಂದೂಡಲಾಯಿತು)

**(ಇಂದು ದಿನಾಂಕ 10-06-2025 ರಂದು ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ. ಹೇ. ಕೇ. ಸರಿ ಇದೆ.**

ಪ್ರಧಾನ **ಸಿವಿಲ್ ನ್ಯಾಯಾಧೀಶರು,**
ಕೊಪ್ಪಳ